ಇಂದು ದಿನಾಂಕ: 10-07-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟಿ ಸವಾಲು: ಎದುರುದಾರರ** ಪರ **ವಕೀಲರಿಂದ :-**

ಜಗಳ ಆದಾಗ ನ್ಯಾಯ ಪಂಚಾಯತಿಯು ಸಹ ಆಗಿರುತ್ತದೆ. ಸದರಿ ರಾಜಿ ಪಂಚಾಯತಿಯು ಎದುರುದಾರಳ ಮನೆ ಆಸ್ಕಿಹಾಳದಲ್ಲಿ ಆಗರುತ್ತದೆ. ಸದರಿ ರಾಜಿ ಪಂಚಾಯತಿಗೆ ನಮ್ಮ ಕಡೆಯಿಂದ ನಮ್ಮ ಮಾವ ಬಸವರಾಜ, ನಮ್ಮ ಅಣ್ಣ ಡ್ಯಾನಿಯಲ್ ಕುಮಾರ್ ಬಂದಿದ್ದರು. ನಾನೇ ಫೋನ ಮಾಡಿ ಕರೆಸಿದ್ದೆ. ಸದರಿ ಪಂಚಾಯತಿಯಲ್ಲಿ ನಾನು ಜಗಳ ಆಡುವುದಿಲ್ಲ ಎಂದು ಆತ ಒಪ್ಪಿಕೊಂಡಿರುತ್ತಾನೆ.

2022 ರ ಫೆಬ್ರುವರಿಯಲ್ಲಿ ಮತ್ತೊಮ್ಮೆ ನಮ್ಮಿಬ್ಬರ ನಡುವೆ ಜಗಳ ಆಗಿರುತ್ತದೆ. ಸದರಿ ಜಗಳ ಆದಾಗು ಸಹ ಎದುರುದಾರನ ಮನೆಯಲ್ಲಿ ಇದ್ದೆ. ಸದರಿ ಜಗಳ ಆದ ನಂತರ ಮತ್ತೊಮ್ಮೆ ಪಂಚಾಯತಿ ಆಗಿ ಮತ್ತೊಮ್ಮೆ ಈ ರೀತಿ ಆಗುವುದಿಲ್ಲ ಎಂದು ಎದುರುದಾರರು ಬಾಂಡ್ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ.

ಈಗ ನೋಡುತ್ತಿರುವಂತಹ ದಾಖಲೆಯು ದಾಖಲೆಯಲ್ಲಿರುವ ಸಹಿಗಳು ನನ್ನದಾಗಿರುತ್ತದೆ. ಸಾಕ್ಷಿಯು ತನ್ನ ಸಹಿಯನ್ನು ಗುರುತಿಸಿದ ಮೇರೆಗೆ ಸದರಿ ದಾಖಲೆಯನ್ನು ನಿಡಿ-1 ಎಂದು ಸಾಕ್ಷಿಯ ಸಹಿಗಳನ್ನು ನಿಡಿ-1(ಎ) ಎಂದು ಮತ್ತು 1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಸದರಿ ಸಹಿ ಮಾತ್ರ ನನ್ನದಾಗಿದ್ದು ಆದರೆ ಅದರಲ್ಲಿರುವ ಬರವಣಿಗೆ ನನ್ನದಲ್ಲ ಎಂದು ಸ್ವತ: ನುಡಿದಿರುತ್ತಾರೆ. ನಿಡಿ-1 ರಲ್ಲಿರುವ ಈಗ ನೋಡುತ್ತಿರುವ ಮತ್ತೊಂದು ಸಹಿಗಳು ನನ್ನ ಮಾವ ಬಸವರಾಜ ಬಂಢಾರಿಯದ್ದಾಗಿರುತ್ತದೆ. ಸಾಕ್ಷಿ ತನ್ನ ಮಾವನ ಸಹಿಯನ್ನು ಗುರುತಿಸಿದ ಮೇರೆಗೆ ಅವುಗಳನ್ನು ನಿಡಿ-1(ಸಿ) ಮತ್ತು ನಿಡಿ-1(ಡಿ) ಎಂದು ಗುರುತಿಸಲಾಯಿತು.

ಸದರಿ ನಿಡಿ-1 ರ ಕುರಿತಂತೆ ಮಾತುಕತೆಯು ಸಹ ಎದುರುದಾರನ ಆಸ್ಕಿಹಾಳದ ಮನೆಯಲ್ಲಿ ಆಗಿರುತ್ತದೆ. ನಿಡಿ-1 ರ ಬಾಂಡನ್ನು ನನ್ನ ಗಂಡ ಬರೆದುಕೊಟ್ಟಿರುತ್ತಾನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-1 ರಂತೆ ಬಾಂಡನ್ನು ಬರೆಯುವಾಗ ಮಾತುಕತೆ ಸಿರವಾರದ ನಮ್ಮ ಮನೆಯಲ್ಲಿ ಆಗಿರುತ್ತದೆ ಎಂದರೆ ಸರಿಯಲ್ಲ. ದಿ:04-10-2025 ರ ವರೆಗೆ ನಾನು ಎದುರುದಾರನ ಮನೆಯಲ್ಲಿ ಇದ್ದೆ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ದಿನಾಂಕ ಸ್ವಲ್ಪ ತಪ್ಪಾಗಿರುತ್ತದೆ ಎಂದು ಸ್ವತ: ನುಡಿದಿರುತ್ತಾರೆ.

(ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾನವಿ.